ಕಾವೇರಿ ನೀರನ್ನು ಚಾಮರಾಜನಗರಕ್ಕೆ ತರುವುದು

379 - ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಚಾಮರಾಜನಗರಕ್ಕೆ ಕಾವೇರಿ ಕುಡಿಯುವ ನೀರಿನ ಯೋಜನೆಯ ಕಾರ್ಯವು ಯಾವ ಹಂತದಲ್ಲಿದೆ?*

2. *ಈ ಯೋಜನೆಯನ್ನು ಪೂರ್ಣಗೊಳಿಸಲು ನಿಗದಿ ಪಡಿಸಿದ ಅವಧಿ ಎಷ್ಟು?*

3. *ಈ ಯೋಜನೆಗೆ ಎಷ್ಟು ಹಣ ನಿಗಧಿ ಪಡಿಸಲಾಗಿದೆ?*

4. *ಇದುವರೆವಿಗೂ ಬಿಡುಗಡೆಯಾಗಿರುವ ಹಣವೆಷ್ಟು?*

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

1. ಹೆಡ್‌ವರ್ಕ್ಸ್ 37 ಕಿ.ಮಿ. ವರೆಗೆ ಕೊಳವೆಗಳನ್ನು ಅಳವಡಿಸುವುದು ಮತ್ತು ಶುದ್ಧೀಕರಣ ಘಟಕ ನಿರ್ಮಿಸುವ ಕಾರ್ಯಗಳು ಮುಕ್ತಾಯ ಹಂತದಲ್ಲಿವೆ. ಇನ್‌ಟೇಕ್ ಜಾಕ್‌ವೆಲ್ ಹಾಗೂ ಓವರ್ ಹೆಡ್ ಬ್ಯಾಂಕ್‌ಗಳ ನಿರ್ಮಾಣ ಮುಗಿದಿದೆ. ಈ ಯೋಜನೆಯನ್ನು ಮೇ 2000ಕ್ಕೆ ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

2. ಕಾಮಗಾರಿಗಳನ್ನು 1991ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದ್ದಿತು. ಗುತ್ತಿಗೆದಾರರು ಕೆಲಸಗಳನ್ನು ಮಧ್ಯದಲ್ಲಿ ನಿಲ್ಲಿಸಿದ್ದರಿಂದ ಕಾಮಗಾರಿ ನಿಂತಿತು. ಈಗ ಕೆಲಸಗಳು 1998ನೇ ಸಾಲಿನಲ್ಲಿ ಪ್ರಾರಂಭವಾಗಿರುತ್ತದೆ ಹಾಗೂ ಮೂರು ವರ್ಷಗಳಲ್ಲಿ ಮುಗಿಸಲು ಯೋಜಿಸಲಾಗಿದೆ.

3. ಈ ಯೋಜನೆಯನ್ನು ಅಂದಾಜು ಮೊತ್ತ ರೂ. 615.00 ಲಕ್ಷಗಳಿಗೆ ಮಾರ್ಚ್ 1990ರಲ್ಲಿ ಸರ್ಕಾರದ ಅನುಮೋದನೆ ನೀಡಿರುತ್ತದೆ. ಪರಿಷ್ಕೃತ ಅಂದಾಜು ಮೊತ್ತವು ರೂ. 2070.00 ಲಕ್ಷಗಳಾಗಿರುತ್ತದೆ.

4. ಈ ಯೋಜನೆಗೆ ರೂ. 1616.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ರಾಜ್ಯದಲ್ಲಿ ರೋಗಗ್ರಸ್ತ ಜವಳಿ ಗಿರಣಿಗಳು

381 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕದಲ್ಲಿರುವ ರೋಗಗ್ರಸ್ತ ಜವಳಿ ಗಿರಣಿಗಳೆಷ್ಟು?*

ಆ) *ರೋಗಗ್ರಸ್ಥವಾಗಲು ಕಾರಣವೇನು?*

ಇ) *ಇವುಗಳನ್ನು ಪುನರ್ ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ರಾಜ್ಯದಲ್ಲಿ 23 ರೋಗಗ್ರಸ್ಥ ಜವಳಿ ಗಿರಣಿಗಳಿವೆ.

ಆ) ರೋಗಗ್ರಸ್ಥವಾಗಲು ಈ ಕೆಳಗಿನ ಕಾರಣಗಳು ಪ್ರಮುಖವಾದವುಗಳೆಂದು ಗುರುತಿಸಲಾಗಿದೆ.

1. ಹಳೆ ಯಂತ್ರೋಪಕರಣಗಳಿಂದಾಗಿ ಕಡಿಮೆ ಕದಿರಿನ ಸಾಮರ್ಥ್ಯ ಬಳಕೆ.
2. ನುರಿತ ಕೆಲಸಗಾರರ ಅಭಾವ
3. ಮಾರಕವಿಲ್ಲದ ಮಾರುಕಟ್ಟೆ ಪರಿಸ್ಥಿತಿ
4. ದುಡಿಮೆ ಬಂಡವಾಳದ ಕೊರತೆ
5. ಹತ್ತಿ ಮತ್ತು ನೂಲಿನ ಮಧ್ಯೆ ಹೊಂದಾಣಿಕೆಯಿಲ್ಲದ ಬೆಲೆಗಳು
6. ನಶಿಸಿ ಹೋಗಿರುವ ಬಂಡವಾಳ
7. ದುಬಾರಿ ವಿದ್ಯುತ್‌ದರ
8. ನಿರಂತರವಿಲ್ಲದ ವಿದ್ಯುತ್ ಪೂರೈಕೆ ಹಾಗೂ
9. ಅಸಮರ್ಥ ವೃತ್ತಿ ಪರ ಆಡಳಿತ.

ಇ) ಖಾಸಗಿ ವಲಯದಲ್ಲಿರುವ ರೋಗಗ್ರಸ್ಥ ಜವಳಿ ಉದ್ಯಮಗಳಿಗೆ ಪುನಶ್ಚೇತನ ನೀಡುವ ಬಗ್ಗೆ ಬಿಐಎಫ್‌ಆರ್ (ಬೋರ್ಡ್ ಫಾರ್ ಇಂಡಸ್ಟ್ರೀಯಲ್ ಫೈನಾನ್ಸ್ ಅಂಡ್ ರೀಕನಸ್ಟ್ರಕ್ಷನ್) ಕ್ರಮ ಕೈಗೊಳ್ಳುತ್ತದೆ. ಇದು ರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿದ್ದು, ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಯಲ್ಲಿ ಬರುತ್ತದೆ. ಸಹಕಾರಿ ವಲಯದ ರೋಗಗ್ರಸ್ಥ ಜವಳಿ ಉದ್ಯಮಗಳಿಗೆ ಪುನಶ್ಚೇತನದ ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ರೂಪಿಸಬೇಕಾಗಿದ್ದು, ಪುನಶ್ಚೇತನದ ಸಾಧ್ಯಾ ಸಾಧ್ಯತೆಗಳ ಬಗ್ಗೆ ಸಮಗ್ರವಾದ ಅಧ್ಯಯನವೊಂದನ್ನು ಮಾಡಿ ಅಧ್ಯಯನ ವರದಿಯ ಆಧಾರದ ಮೇಲೆ ಪುನಶ್ಚೇತನ ಕಾರ್ಯಕ್ರಮಗಳನ್ನು ರೂಪಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಲ್ಪ ಸಂಖ್ಯಾತರ ಸ್ವಯಂ ಸೇವಾ ಸಂಸ್ಥೆಗಳಿಗೆ ಧನಸಹಾಯ

382 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಎಷ್ಟು ಸ್ವಯಂ ಸೇವಾ ಸಂಸ್ಥೆಗಳಿಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಧನಸಹಾಯವನ್ನು ನೀಡುತ್ತಿವೆ.

ಆ) ಆ ಧನಸಹಾಯದಿಂದ ಸದರಿ ಸೇವಾ ಸಂಸ್ಥೆಗಳು ಯಾವ ಕೆಲಸಗಳನ್ನು ಮಾಡುತ್ತಿವೆ? (ಕಳೆದ ಮೂರು ವರ್ಷಗಳ ವಿವರ ನೀಡುವುದು)